

ನೆತ್ತರು ಕುಡಿಯುತ್ತಾ ಮೋಜು ಮಸ್ತಿಗಳಲ್ಲಿ ಮುಳುಗಿದ್ದಾರೆ. ಅವರ ಎದೆಗಳಲ್ಲಿ ಯಾವೊತ್ತಿಗೂ ಕರುಣೆ ಮತ್ತು ಮಾನವೀಯತೆ ಜಿನುಗುವುದಿಲ್ಲ. ಖಂಡಿತಾ ದೇವರು ಅವರಿಗೆ ಒಳ್ಳೆಯದು ಮಾಡುವುದಿಲ್ಲ...' ಎಂದವನು ತನ್ನ ಮಗ ರಶೀದನ ಕಡೆ ನೋಡಿ, 'ತಂಗಿ, ನಿನ್ನ ಮಗನನ್ನೂ ಒಂಟೆಯ ಮೇಲೆ ಕೂರಿಸಿಕೊಳ್ಳಬಹುದಿತ್ತು. ಆದರೆ ಸರಿಯಾದ ಊಟವಿಲ್ಲದೆ ಒಂಟೆಯೂ ಸುಸ್ತಾಗಿದೆ. ನನ್ನ ಅಪ್ಪ ಅಮ್ಮನಿಗೆ ಜ್ವರದಿಂದಾಗಿ ನಡೆಯಲು ಸಾಧ್ಯವಾಗುತ್ತಿಲ್ಲ. ಒಂಟೆ ಯಾವಾಗ ಅಡ್ಡಬೀಳುವುದೋ ಹೇಳಲಿಕ್ಕೆ ಬರುವುದಿಲ್ಲ. ಇದನ್ನು ಗೋಳು ಹೊಯ್ದುಕೊಳ್ಳುತ್ತಿರುವುದಕ್ಕೆ ದೇವರ ಮತ್ತೆಂಥ ಶಾಪಕ್ಕೆ ನಾನು ಗುರಿಯಾಗಬೇಕೋ! ಅಗೋ ಅಲ್ಲಿ ಹಿಂದೆ ನನ್ನ ಹೆಂಡತಿ ನನ್ನ ಇಬ್ಬರು ಮಕ್ಕಳನ್ನು ಸಾಗಿಸಿಕೊಂಡು ಬರುತ್ತಿದ್ದಾಳೆ...' ಎಂದು ಹಿಂದಕ್ಕೆ ತಿರುಗಿ ಹೇಳಿದ್ದ.

'ಅಷ್ಟಾದರೂ ಕರುಣೆಯಿದೆಯಲ್ಲಣ್ಣ, ಅಷ್ಟೇ ಸಾಕು. ಇವನು ಇನ್ನೆಷ್ಟು ದೂರ ನಡೆಯುತ್ತಾನೋ ನಡೆಯಲಿ, ಆಮೇಲೆ ನಾನೇ ಭುಜದ ಮೇಲೆ ಹಾಕಿಕೊಂಡು ನಡೆಯುತ್ತೇನೆ, ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತು ತಿರುಗಾಡಿರಲಿಲ್ಲವೆ' ಎಂದಿದ್ದಳು. ಆತ ಒಂಟೆಯ ಮೇಲೆ ಚಾಚಿದ್ದ ಬ್ಯಾಗಿನಿಂದ ಐದಾರು ಖರ್ಜೂರಗಳನ್ನು ಅವಳ ಕೈಗೆ ಇಟ್ಟಿದ್ದ. ಒಂಟೆಯ ಮೇಲೆ ಕುಳಿತಿದ್ದ ಆತನ ಅಪ್ಪ 'ನಾನು ಚಿಕ್ಕಂದಿನಿಂದಲೂ ನೋಡುತ್ತಿದ್ದೇನೆ, ಒಬ್ಬನೇ ಒಬ್ಬನೂ ಕರುಣೆಯುಳ್ಳವನು ಈ ಸುತ್ತಮುತ್ತಲಿನ ಪುಟ್ಟ ರಾಷ್ಟ್ರಗಳಿಗೆ ದೊರೆಯಾಗಿ ಸಿಂಹಾಸನ ಏರಲಿಲ್ಲ. ಜಗತ್ತಿನಲ್ಲಿ ಲಭ್ಯವಿರುವ ಸಂಪತ್ತನ್ನು ಎಲ್ಲರೂ ಶಾಂತಿಯುತವಾಗಿ ಹಂಚಿಕೊಂಡು ತಿಂದರೆ ನೂರಾರು ವರ್ಷಗಳ ಕಾಲ ನೆಮ್ಮದಿಯಿಂದ ಬದುಕಬಹುದು. ಕೆಲವೇ ಕೆಲವರ ಸ್ವಾರ್ಥ, ದುರಾಸೆ, ಕುಯುಕ್ತಿಗಳಿಂದಾಗಿ ನಮ್ಮಂಥ ಸಾಮಾನ್ಯರು ನರಳುವಂತಾಗಿದೆ. ಧರ್ಮ ಗ್ರಂಥಗಳು, ದೇವರುಗಳು ಈ ಸೈತಾನರಿಗೆ ಏಕೆ ಒಳ್ಳೆಯ ಬುದ್ಧಿ ಕೊಡುವುದಿಲ್ಲವೋ ಎಂದು ನನಗೆ ಆಶ್ಚರ್ಯವಾಗಿದೆ. ಯಾವ ಧರ್ಮವೂ ಕ್ರೌರ್ಯ, ಸ್ವಾರ್ಥ, ಅಮಾನವೀಯತೆಯನ್ನು ಬೋಧಿಸುವುದಿಲ್ಲ. ಈ ಹಂದಿಗಳು ತಮ್ಮ ಹೃದಯ ಮನಸ್ಸುಗಳನ್ನು ಅಂಧಕಾರದಲ್ಲಿ ಹೂತಿರುತ್ತಾರೆ...' ಕೆಮ್ಮು ಬಂದು ಆ ಹಿರಿಯರು ಮಾತು ನಿಲ್ಲಿಸಿದ್ದರು. 'ನನ್ನ ಅಪ್ಪ ನಮ್ಮೂರಿನ ಧರ್ಮಾಧಿಕಾರಿ. ಹಾಗಾಗಿ ಇಷ್ಟೆಲ್ಲಾ ಮಾತನಾಡುತ್ತಿದ್ದಾರೆ' ಎಂದು ನಕ್ಕಿದ್ದ ಒಂಟೆಯ ಒಡೆಯ. 'ನಾನು ಕೂಡಾ ಶಾಲೆಯೊಂದರಲ್ಲಿ ಶಿಕ್ಷಕಿ. ಶಿಕ್ಷಕರ ಮಾತುಗಳನ್ನು ಆಳುವ ದೊರೆಗಳು ಕೇಳುವಂತಿದ್ದರೆ ಜಗತ್ತಿನಲ್ಲಿ ಅನಾಹುತಗಳೇ ನಡೆಯುತ್ತಿರಲಿಲ್ಲ' — ಹಮೀದಾ ಬೇಗಂ ಸ್ವಲ್ಪ ಧ್ವನಿಯೇರಿಸಿಯೇ ಮಾತನಾಡಿದ್ದಳು. 'ಸತ್ಯ ನಿನ್ನ ಮಾತು ತಂಗಿ. ಆಳುವವರು ಸಾಮಾನ್ಯವಾಗಿ ಮೂರ್ಖರಾಗಿರುತ್ತಾರೆ. ಸಾಮಾನ್ಯ ಜನ ಎಷ್ಟು ಬುದ್ಧಿವಂತರಾಗಿದ್ದರೂ ಮೂರ್ಖರಿಂದ, ದುರುಳರಿಂದ ಆಳಲ್ಪಡುತ್ತೇವೆ. ಮೂರ್ಖರು ತಮ್ಮನ್ನು ಸೃಷ್ಟಿಸಿದ ದೇವರ ಮಾತನ್ನು ಕೂಡಾ ಕೇಳುವುದಿಲ್ಲ' ಆತ ಮಾತು ಸೇರಿಸಿ, ಒಂಟೆಯನ್ನು ನಡೆಸುತ್ತಾ ಮುಂದೆ ನಡೆದಿದ್ದ. ಸ್ವಲ್ಪ ಸುಧಾರಿಸಿಕೊಳ್ಳಲೆಂದು ಅವಳು ಮರವೊಂದರ ಕೆಳಗೆ ಮಗನೊಂದಿಗೆ ಕುಳಿತಳು.

ದಾರಿಯಲ್ಲಿ ತಮ್ಮಂತೆ ಎಲ್ಲಾ ವಯಸ್ಸಿನ ಜನ ಗೊತ್ತು ಗುರಿಯಿಲ್ಲದೆ ಭಯದ ದಾರಿಯಲ್ಲಿ ನಡೆಯುತ್ತಿದ್ದಾರೆ. 'ಅಮ್ಮ, ನಮಗೆ ಪಪ್ಪಾ ಸಿಗುತ್ತಾನ' ಮಗ ಕೇಳುತ್ತಾನೆ. ಪಶ್ಚಿಮದಲ್ಲಿ ಸೂರ್ಯ ಮುಳುಗಲು ತಯಾರಿ ನಡೆಸುತ್ತಿರುವುದು ಅವಳ ಕಣ್ಣಿಗೆ ಬೀಳುತ್ತದೆ. 'ಹೌದು ಮಗನೆ, ನಿನ್ನ ಪಪ್ಪಾ ಖಂಡಿತವಾಗಿಯೂ ಸಿಗುತ್ತಾನೆ. ಆತ ಎಲ್ಲಿದ್ದರೂ ಹುಡುಕಿ ನಿನ್ನನ್ನು ಅವನ ಮಡಿಲಿಗೆ ಹಾಕುತ್ತೇನೆ' ಅವಳು ಅವನ ತಲೆ ಸವರಿ ಹೇಳುತ್ತಾಳೆ. ಅವಳು ಹೇಳುತ್ತಿರುವುದು ನಿಜವೋ ಸುಳ್ಳೋ! 'ಪಪ್ಪಾ ಸೈನಿಕ ಅಲ್ಲವಾ. ಅವನೂ ಯುದ್ಧ ಮಾಡುತ್ತಿರಬಹುದು. ಅವನೂ ಬಾಂಬುಗಳನ್ನು ಎಸೆಯುತ್ತಿರಬಹುದು. ಪಪ್ಪಾ ಸಿಕ್ಕಿದರೆ ಅವನ ಕೈಯಿಂದ ಬಂದೂಕು, ಬಾಂಬುಗಳನ್ನು ಕಿತ್ತು ಕೊಂಡು ಯುದ್ಧ ಬೇಡವೆಂದು ಹೇಳುತ್ತೇನೆ' ಮಗನ ಬಾಯಿಂದ ಬಂದ ಮಾತುಗಳು ಅವಳ ಕಣ್ಣುಗಳನ್ನು ತೇವಗೊಳಿಸುತ್ತವೆ. 'ಅಯ್ಯೋ ನನ್ನ ಕಂದ' ಎಂದು ಅಪ್ಪಿಕೊಂಡು ಹಣೆಗೊಂದು ಮುತ್ತು ಕೊಡುತ್ತಾಳೆ. ಅರೆ, ಕಂದನ ಮೈ ಸಣ್ಣಗೆ ಸುಡುತ್ತಿದೆ. ಅಷ್ಟರಲ್ಲಿ ಯಾರೋ ಇಬ್ಬರು ಬಂದು ಪಕ್ಕ ಕೂರುತ್ತಾರೆ. ಬಹುಶಃ ಅವರಿಬ್ಬರು ಗಂಡ ಹೆಂಡತಿಯಿರಬೇಕು. ಹೆಂಗಸಿನ ಬಟ್ಟೆಗಳು ಮಸಿಯಾಗಿವೆ. ಕಣ್ಣುಗಳು ಕೆಂಪಗಾಗಿವೆ. ಸುಮಾರು ಅರವತ್ತಾದರೂ ವಯಸ್ಸಾಗಿದೆ. ಆದರೆ ಗಟ್ಟಿಮುಟ್ಟಾಗಿ ಇದ್ದಾಳೆ. ಆಕೆಯ ಗಂಡ ಇರಬಹುದಾದ ಗಂಡಸು ಬ್ಯಾಗಿನಿಂದ ನೀರಿನ ಬಾಟಲಿ ತೆಗೆದು ಅವಳಿಗೆ ಒಂದು ಗುಕ್ಕು ನೀರು ಕುಡಿಸುತ್ತಾನೆ. 'ನೀವು?' ಆ ಹೆಂಗಸನ್ನು ಕೇಳುತ್ತಾಳೆ ಹಮೀದಾ. ಹಾಗೆ ಮಾತನಾಡುತ್ತಿದ್ದಂತೆಯೇ ಆ ಹೆಂಗಸಿನ ದುಃಖದ ಕಟ್ಟೆಯೊಡೆಯುತ್ತದೆ. 'ಮಗಳೆ ಏನು ಹೇಳಲಿ, ರಾಕ್ಷಸರು ಬಾಂಬ್‌ಗಳನ್ನು ಸುರಿದು ನಮ್ಮ ಬೇಕರಿಯನ್ನು ಭಸ್ಮ ಮಾಡಿದರು. ಸುಮಾರು ಮೂವತ್ತು ವರ್ಷಗಳಿಂದಲೂ ನನ್ನ ಈ ಗಂಡನೊಂದಿಗೆ ಕಷ್ಟಪಟ್ಟು ಬೇಕರಿಯನ್ನು ನಡೆಸುತ್ತಿದ್ದೆ. ಸಾವಿರಾರು ಜನರಿಗೆ ಬ್ರೆಡ್ಡು, ಬಿಸ್ಕತ್ತುಗಳನ್ನು ಬೇಯಿಸಿ ಕೊಡುತ್ತಿದ್ದೆವು. ಇಂದು ನಮಗೆ ಒಂದು ಬಿಸ್ಕತ್ತು ಸಿಗದಾಗಿದೆ. ದೇವರು ತುಂಬಾ ಕ್ರೂರಿಯಿದ್ದಾನೆ. ನನ್ನ ಕೈಗೇನಾದರೂ ಬಂದೂಕು, ಬಾಂಬು ಸಿಕ್ಕಿದರೆ ಯುದ್ಧಕ್ಕೆ ಕಾರಣರಾದವರ ಕೈಕಾಲು, ಕತ್ತುಗಳನ್ನು ಕತ್ತರಿಸಿ ಹಾಕುತ್ತೇನೆ...' ಆ ಹೆಂಗಸಿನ ದುಃಖದ ಮಾತುಗಳಲ್ಲೂ ರೋಷ ಉಕ್ಕುತ್ತದೆ. ಆಗ ಆಕೆಯ ಗಂಡ 'ಅಯ್ಯೋ ಹೆಣ್ಣೆ, ಅವರೆಲ್ಲಿ ನಿನ್ನ ಕೈಗೆ ಸಿಗುತ್ತಾರೆ. ಇಷ್ಟಕ್ಕೂ ನಮ್ಮಂಥ ಸಣ್ಣಪುಟ್ಟ ದೇಶಗಳ ನಡುವೆ ದ್ವೇಷ, ಮತ್ಸರಗಳನ್ನು ಹುಟ್ಟಿಸುವುದು ದೊಡ್ಡ ದೊಡ್ಡ ಶ್ರೀಮಂತ ರಾಷ್ಟ್ರಗಳಂತೆ. ಅವರ ಕುತಂತ್ರಕ್ಕೆ ನಮ್ಮಂಥವರು ಬಲಿಯಾಗುತ್ತೇವೆ. ಯಾವ ಪುರುಷಾರ್ಥಕ್ಕಾಗಿ ಯುದ್ಧಗಳನ್ನು ಮಾಡುತ್ತಾರೋ; ದೇವರೇ ದಯಾಮಯನಾದ ನೀನು ಇಂಥ ರಕ್ತ ಪಿಪಾಸುಗಳಿಗೆಲ್ಲ ಒಳ್ಳೆಯ ಬುದ್ಧಿಯನ್ನು ಕೊಡಬಾರದೆ' ಬೇಕರಿ ಯಜಮಾನ ಮಾತು ಸೇರಿಸಿದ್ದ.

'ನಮ್ಮ ಪಪ್ಪಾ ಸೈನಿಕ. ತುಂಬಾ ಒಳ್ಳೆಯವನು.